Total No. of Questions : 61 ]

Total No. of Printed Pages : 4 ]

**Code No. 16**

**March, 2010**

# OPTIONAL KANNADA

Time : 3 Hours 15 Minutes ]  [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : $7 \times 1 = 7$

1) ಭರತನ ರಾಣಿಯರು ವನವಿಹಾರಕ್ಕಾಗಿ ಎಲ್ಲಿಗೆ ಬಂದರು ?

2) ಖಾಂಡವ ವನದ ಒಡೆಯನಾರು ?

3) ಶ್ವಪಚನ ದೇವರು ಶಿವಪೂಜೆಯನ್ನು ಎಲ್ಲಿ ಮಾಡುತ್ತಿದ್ದರು ?

4) ಊರ್ವಶಿಯು ಅರ್ಜುನನಿಗೆ ಕೊಟ್ಟ ಶಾಪ ಯಾವುದು ?

5) ಮಂತ್ರಿಯ ಲಕ್ಷಣಗಳೇನೆಂದು ಪುಲಿಗೆರೆ ಸೋಮನಾಥ ಹೇಳಿದ್ದಾರೆ ?

6) ಗೊಗ್ಗರು ದನಿಯ ಗಿಡ್ಡ ಖನ್ನಾ ಯಾವ ಊರಿನವನು ?

7) ವರ್ತಕರು ತಮ್ಮ ಸರಕುಗಳನ್ನು ಮಾರಲು ಯಾವ ಜಾತ್ರೆಗೆ ಬಂದಿದ್ದರು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : $3 \times 2 = 6$

8) ಮಾವಿನ ಮರವನ್ನು ಪಂಪ ಕವಿ ಹೇಗೆ ಬಣ್ಣಿಸಿದ್ದಾನೆ ?

9) ಖಾಂಡವ ವನದಲ್ಲಿದ್ದ ಯಾವ ಯಾವ ಪ್ರಾಣಿಗಳು ನಾಶವಾದವು ?

10) ಶಿವನು ಸಾಮವೇದಿಗಳ ಕನಸಿನಲ್ಲಿ ಕಾಣಿಸಿಕೊಂಡು ನುಡಿದಿದ್ದೇನು ?

11) ಕಳಿತ ಹಲಾಹಲದ ಕಜ್ಜಾಯ ಎಂದರೇನು ?

12) ಸರ್ವಜ್ಞತ್ವವು ಹೇಗೆ ಪ್ರಾಪ್ತವಾಗುತ್ತದೆಂದು ಪುಲಿಗೆರೆ ಸೋಮನಾಥ ಹೇಳಿದ್ದಾನೆ ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

13) ಕುಲದ ಕಲ್ಮಷವಳಿದು ಸಾಮವೇದಿಗಳ ಮನಸ್ಸಿನಲ್ಲಿ ಭಕ್ತಿ ನೆಲೆಸಿದ್ದು ಹೇಗೆ ?

14) ಅರ್ಜುನನು ತಿಳಿಸಿದ ಮನುಷ್ಯನ ಲಕ್ಷಣಗಳೇನು ?

[ Turn over

15) ಊರ್ವಶಿಯ ರೋಷದ ವರ್ಣನೆಯನ್ನು ಕವಿ ಕುಮಾರವ್ಯಾಸ ಹೇಗೆ ಮಾಡಿದ್ದಾನೆ ?

16) ಭರತೇಶನು ಅರಸಿಯರಿಂದ ಯಾವ ಯಾವ ಕಾಣಿಕೆಗಳನ್ನು ಪಡೆದನು ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ಸ್ತ್ರೀಯರು ಪ್ರಕೃತಿಯ ಬಳಿ ಏನೆಂದು ಕ್ಷಮೆ ಕೇಳಿದರು ?

18) ಸಾಮವೇದಿಗಳ ಲಘುತ್ವ ಅಳಿದು ಗುರುತ್ವ ಪ್ರಾಪ್ತವಾಗಿದ್ದು ಹೇಗೆ ?

19) ಮಾನವ ಮತ್ತು ದೇವತಾ ಸಂಸ್ಕೃತಿಯ ಸ್ವರೂಪವನ್ನು ಕಾವ್ಯಭಾಗದ ಆಧಾರದ ಮೇಲೆ ವಿವರಿಸಿ.

20) ಅರ್ಜುನ ಮತ್ತು ಮಾತಲಿಯವರ ನಡುವಿನ ಸಂವಾದವನ್ನು ಕುರಿತು ವಿವರಿಸಿ.

V. ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : $2 \times 3 = 6$

21) ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಬೀಜಂ ಕೆಲಂ।
ಸಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್ ॥
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥

22) ಚಿತ್ತವಿಲ್ಲದೆ ಗುಡಿ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ। ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ.

23) ನೋಟ ರಾಯನ ಮೇಲೆ ನೆನಹು ರಾಗದ ಮೇಲೆ
ನೀಟ ತಂತಿಯ ಮೇಲೆ ಬೆರಳು
ಚಾಟುಕಾತಿಯರು ಚಾಂದಸಿಕೆಯ ನೂಂಕಿ ಸ
ಘಾಟಿಕೆಯಿಂದ ಪಾಡಿದರು.

VI. ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

24) ತರುಗಳ್ ನಿನ್ನಂತೆ ಚೆನ್ನಂಗಳೇ ॥

25) ಜ್ಯೋತಿಯಿಂ ಜ್ಯೋತಿಯಂ ಪೊತ್ತಿಸಿದ ತೆರನಾಯ್ತು.

26) ನೀನೆಮ್ಮ ವಂಶೋದ್ಭವಕೆ ಜನನಿ.

27) ಅನ್ನದೇವರ ಮುಂದೆ ಇನ್ನು ದೇವರು ಉಂಟೆ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) ದೇವೇಂದ್ರನು ತಂದೆಯ ಮಣ್ಣಿಗೆ ತಡವಾಗಿ ಬಂದಾಗ ಮನೆಯವರು ಮತ್ತು ಊರಿನವರು ಹೇಗೆ ಪ್ರತಿಕ್ರಿಯಿಸಿದರು ? ವಿವರಿಸಿ.

29) ದೇವೇಂದ್ರನ ತಾಯಿ ಮನೆಯ ಜವಾಬ್ದಾರಿಯನ್ನು ಹೇಗೆ ನಿಭಾಯಿಸಿದಳು ?

30) ದಿವಸದ ದಿನದ ಮನೆಯ ವಾತಾವರಣ ಮತ್ತು ಸಂಭ್ರಮ ಹೇಗಿತ್ತು ? ವಿವರಿಸಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರನ ತಂದೆಯ ಸ್ವಭಾವವನ್ನು ಕುರಿತು ಬರೆಯಿರಿ.

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ನಿನ್ನ ಉದ್ದುರುಟತನದ ತಪ್ಪನ್ನೀಗಳೇ ಒಪ್ಪಿಕೊಳ್ಳುವಿಯೋ ಹೇಗೆ ?

34) ನಾನು ತಿಳಿಗನ್ನಡದಲ್ಲಿಯೇ ಹೇಳಿದೆನೆಂದು ನನಗೆ ಜ್ಞಾಪಕವಣ್ಣ.

35) ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತೆ; ಅಯ್ಯೊ ?

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ನಾಮಧೇಯದ ಬಗ್ಗೆ ಇಮ್ಮಡಿ ತಿಮ್ಮರಾಯರ ಅಭಿಪ್ರಾಯವೇನು ?

37) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

38) ನಂಜಸೆಟ್ಟಿ ಮಾದೇವಮ್ಮಣ್ಣಿಯಲ್ಲಿ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಮಾದೇವಮ್ಮಣ್ಣಿಯ ವ್ಯಕ್ತಿತ್ವವನ್ನು ಸವಿವರವಾಗಿ ನಿರೂಪಿಸಿ.

40) ಮಹೀಶೂರ ಪ್ರಜೆಗಳ ರಾಜಭಕ್ತಿ ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ ?

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : $2 \times 2 = 4$

41) ಆರು ಋತುಗಳು

42) ರಗಳೆ

43) ಅರಿಷಡ್ವರ್ಗಗಳು

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : 4 × { EQ \f(1,2) }= 2

44) ಚೂತರಾಜ

45) ತೃಣ

46) ಉಡುರಾಜ

47) ಅನಲ

48) ಪನಸು

49) ನಾಭಿ

XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ : 3 × 1 = 3

50) ತ್ಯಾಗ

51) ಮೃಗ

52) ಸಿಂಹ

53) ವಸಂತ

54) ಬ್ರಹ್ಮ

XV. ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ **ಎರಡನ್ನು** ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : 2 × 1 = 2

55) ಹಲ್ಲುಕಿರಿ

56) ವೇದವಾಕ್ಯ

57) ಓಬೀರಾಯನ ಕಾಲ

58) ತಲೆಬಾಗು

## ಭಾಗ – V

XVI. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಪಂಪಂ ಧಾತ್ರೀವಳಯ ನಿ
ಳಿಂಪಂ ಚತುರಂಗ ಬಳ ಭಯಂಕರಣಂ ನಿ
ಷ್ಕಂಪಂ ಲಲಿತಾಲಂಕರ
ಣಂ ಪಂಚಶರೈಕ ರೂಪನಪಗತ ಪಾಪಂ.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಎಲೆಲೆ ಪಿಚ್ಚ ಬ್ರಾಹ್ಮಣ ನಾನೆ ನಿನಗೆ ತೊತ್ತಿನ ಮಗ ನಾನೆ ನಾನೆಯೆನೆ ನೀನೆ ನೀನೆಯೆಂದು ಕೈವಿಡಿದೆಳೆವುದುಂ ಕೆರಳ್ದು ಕುಮಾರಂ ಕೆಂಪಡರ್ದ ಕಂಗಳಿಂ ಕೆತ್ತುವ ಮೀಸೆಯಂ ನಡಗುವ ಸರ್ವಾಂಗದಿಂದೆದ್ದು ವೃದ್ಧನಂ ಕೊಲುವೆನಾದುದಕ್ಕೆಂದು ಕೈ ನೀಡಿ ತಿವಿಯಲವ್ವಳಿಸೆ.

61) ಕೆಳಗೆ ಸೂಚಿಸಿರುವ ಯಾವುದಾದರೂ **ಒಂದು** ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ಮಳೆ

ಆ) ಕನಸು